

# ಸಿಂಪಲ್ ಮದುವೆ?

ಮಲ್ಲೈಕಾ ಆರೋರಾ ದೂರದ ಮಾಲ್ದೀವ್ಸ್‌ನಲ್ಲಿ ರಜಾದ ಮಜಾ ಸವಿಯುತ್ತಿದ್ದಾಳೆ. ಅಲ್ಲಿಂದ ಸಾಕಷ್ಟು ಫೋಟೊಗಳನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹಾಕಿದ್ದಾಳೆ. ಅದರಲ್ಲಿ ಕೆಲವು ಸೆಕ್ಸೀ ಫೋಟೊಗಳನ್ನು ನೋಡಿ ಪ್ರಿಯಕರ ಅರ್ಜುನ್ ಕಪೂರ್ ಕೂಡಾ ನಿಟ್ಟುಸಿರು ಬಿಟ್ಟಿದ್ದಾನಂತೆ. ಬಲ್ಲ ಮೂಲಗಳ ಪ್ರಕಾರ, ಅರ್ಜುನ್ ಕಪೂರ್ ಮತ್ತು ಮಲೈಕಾ ಮದುವೆ ಏಪ್ರಿಲ್ 19ಕ್ಕೆ ಫಿಕ್ಸ್ ಆಗಿದೆ. ಹಾಗೆಂದೇ ಮದುವೆಗೆ ಮುನ್ನ ಹಳೆಯ ಗೆಳೆಯ–ಗೆಳತಿಯರ ಜೊತೆಗೆ ಒಂದು ಫೈನಲ್ ರೌಂಡ್ ಹೊಡೆದು ಬರಬೇಕೆಂದು ಮಲೈಕಾ ಮಾರಿಷಸ್‌ಗೆ ಹೋಗಿದ್ದಳಂತೆ. ಮದುವೆ ಎಂದರೆ ದೀಪಿಕಾ, ಪ್ರಿಯಾಂಕಾ ಅವರ ಮದುವೆಯಂತೆ ಊರೆಲ್ಲ ಕರೆದು ಔತಣ ನೀಡೋದಿಲ್ಲವಂತೆ. ಸಿಂಪಲ್ಲಾಗಿ ಚರ್ಚ್ ಒಂದರಲ್ಲಿ ರಿಂಗ್ ವಿನಿಮಯ ಮಾಡಿಕೊಳ್ಳುತ್ತಾರೆ ಎಂದು ಸುದ್ದಿ ಹಬ್ಬಿದೆ. ■

# ಜಗಳಗಂಟಿ ಕಂಗನಾ

ಕಂಗನಾ ರನೋಟ್ ತನಗಂಟಿರುವ ಜಗಳಗಂಟಿ ಎಂಬ ಬಿರುದನ್ನು ಬಿಟ್ಟುಕೊಡುವಂತೆ ಕಾಣುತ್ತಿಲ್ಲ. ಕೆಲವು ವರ್ಷಗಳಿಂದ ಹೃತಿಕ್ ರೋಶನ್ ಜೊತೆಗೆ ನಡೆದಿರುವ ವಾಕ್ಸಮರ ಆಗಾಗ್ಗೆ ಭುಗಿಲೇಳುತ್ತಲೇ ಇದೆ. ಅದರ ಮಧ್ಯೆ ಇದೀಗ ಆಲಿಯಾ ಭಟ್ ಜೊತೆಗೆ ಕಂಗನಾ ಜಗಳಕ್ಕೆ ಕಾಲು ಕೆರೆದಿರುವ ವರ್ತಮಾನ ಬಂದಿದೆ. ಈ ಸಲ ಕಂಗನಾಳ ಕೆಂಗಣ್ಣು ಆಲಿಯಾ ಮತ್ತು ರಣಬೀರ್ ಮದುವೆಯ ಮೇಲೆ ಬಿದ್ದಿದೆ. ಕಳೆದ ವಾರ ಆಕೆ ನೀಡಿದ ಸಂದರ್ಶನವೊಂದರಲ್ಲಿ 'ರಣಬೀರ್‌ಗೆ 37 ವರ್ಷ. ಆಲಿಯಾ 27ರ ಹರೆಯದವಳು. ಇವರಿಬ್ಬರನ್ನೂ ಈಗ ಯುವ ನಟರು ಎಂದು ಕರೆಯುವುದರಲ್ಲಿ ಅರ್ಥ ಇದೆಯಾ? ಇವರಿಬ್ಬರೂ ಇನ್ನೂ ಮಕ್ಕಳಂತೆ ಆಡುತ್ತಿದ್ದಾರೆ. ನನ್ನ ಅಮ್ಮನಿಗೆ 27ರ ಹರೆಯದಲ್ಲಿ ಮೂರು ಮಕ್ಕಳಾಗಿದ್ದವು' ಎಂದಿದ್ದಾಳೆ.

ಕಂಗನಾ ಹೀಗೆ ಎಲ್ಲರನ್ನೂ ಉದ್ದೇಶಪೂರ್ವಕವಾಗಿ ಕೆಣಕುತ್ತಿದ್ದಾಳೋ ಅಥವಾ ಸಹಜವಾಗಿ ಬಾಯಿಬಡುಕಿಯೇ ಎನ್ನುವುದೀಗ ಬಾಲಿವುಡ್‌ನಲ್ಲಿ ಎದ್ದಿರುವ ಪ್ರಶ್ನೆ. ಈ ಹಿಂದೆ ಅಮೀರ್ ಖಾನ್ ಮತ್ತು ಕರಣ್ ಜೋಹರ್‌ನನ್ನೂ ಹೀಗೆಯೇ ಕಂಗನಾ ಕೆಣಕಿದ್ದುಂಟು. 'ನಾನು ಸುಮ್ಮನೆ ಮಾತನಾಡುವುದಿಲ್ಲ. ಆದರೆ ನನ್ನನ್ನು ಕೆಣಕಿದವರನ್ನು ಬಿಡುವುದಿಲ್ಲ' ಎನ್ನುತ್ತಾರೆ.

ಈ ಮಧ್ಯೆ ಕಂಗನಾ ಬಾಲಿವುಡ್‌ನ ಅತ್ಯಧಿಕ ಸಂಭಾವನೆ ಪಡೆಯುವ ನಟಿ ಎನ್ನುವ ಸುದ್ದಿಯೂ ಹಬ್ಬಿದೆ. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಜೀವನಾಧಾರಿತ ಚಿತ್ರ 'ತಲೈವ'ದಲ್ಲಿ ನಟಿಸಲು ಆಕೆಗೆ 24 ಕೋಟಿ ರೂಪಾಯಿ ನೀಡಲಾಗಿದೆಯಂತೆ. ನಿರ್ದೇಶಕ ಎ.ಎಲ್.ವಿಜಯ್ ಈ ಸುದ್ದಿಯನ್ನು ಮೊದಲು ನಿರಾಕರಿಸಿದರೂ ಬಳಿಕ 'ಆಕೆಗೆ ಎಷ್ಟೇ ಸಂಭಾವನೆ ನೀಡಿದರೂ ಅದಕ್ಕೆ ಆಕೆ ಅರ್ಹಳು' ಎಂದಿದ್ದಾರೆ.

ರಾಜ್‌ಕುಮಾರ್ ರಾವ್ ಜೊತೆಗೆ ನಟಿಸಿರುವ ಕಾಮಿಡಿ ಥ್ರಿಲ್ಲರ್ 'ಮೆಂಟಲ್ ಹೈ ಕ್ಯಾ' ಮತ್ತು ಕ್ರೀಡಾ ಚಿತ್ರ 'ಪಂಗಾ' ಕಂಗನಾ ನಟಿಸಿರುವ ಎರಡು ಹೊಸ ಚಿತ್ರಗಳು. 'ಮೆಂಟಲ್..' ಚಿತ್ರದಲ್ಲಿ ಕಂಗನಾ ನಟನೆಯ ಬಗ್ಗೆ ಭಾರೀ ಹೊಗಳಿಕೆ ಕೇಳಿಬರುತ್ತಿದೆ.

■ ಬಿಂದು

